ಮಾಡಬೇಕು, ಬೇರೆ ಕಡೆ ವರ್ಗ ಮಾಡುವುದಕ್ಕಾಗುವುದಿಲ್ಲ. ನಿರ್ದಿಷ್ಟವಾಗಿ ಅವರ ಮೇಲೆ ದೂರು ಕೊಡಲಿ. ಸ್ವತಃ ನಾವೇ ವಿಚಾರಣೆ ಮಾಡಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಯಾರು ಅರ್ಹರಿರುತ್ತಾರೋ ಅವರನ್ನು ಅಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ದೂರು ಕೊಟ್ಟರೆ ಏನು ಮಾಡುತ್ತೀರಿ? ಆಪರು ಅಲ್ಲಿ ಇರುವವರೆಗೂ ನಾವು ಯಾವ ದೂರು ಕೊಟ್ಟರೂ ಮುಚ್ಚಿಡುತ್ತಾರೆ. ಈಗಾಗಲೇ ಆ ರೀತಿ ಕೊಟ್ಟಿದ್ದನ್ನು ವಾಪಸ್ಸು ಪಟ್ಟಿದ್ದಾರೆ ಅವರನ್ನು ಛೇಂಜ್ ಮಾಡಿದಮೇಲೆ ದೂರು ಕೊಡಂತ್ತೇವೆ. ಅವರನ್ನು ಅಲ್ಲೇ ಇಟ್ಟುಕೊಂಡು ನಾವು ದೂರು ಕೊಟ್ಟರೆ ಅದು ಕಸದ ಬುಟ್ಟಿಗೆ ಹೋಗುತ್ತದೆ.

ಅಧ್ಯಕ್ಷರು,—ಶ್ರೀಮತಿ ಸುಮಾ ವಸಂತ ಅವರೇ, ತಮ್ಮ ಪ್ರಶ್ನೆಗೆ ಟೈಂ ಕೇಳಿದ್ದಾರೆ. ಆಮೇಲೆ ಉತ್ತರ ಕೊಡಿಸುತ್ತೇನೆ.

ಲೋಕಾಯುಕ್ತದವರಿಂದ ಇತ್ಯರ್ಥವಾದ ಅರ್ಜಿಗಳು

೧೬೫೬. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ ರಿಂದ ೧೯೮೮ರ ವರೆಗೆ ಲೋಕಾಯುಕ್ತಕ್ಕೆ ಬಂದಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ಇತ್ಯರ್ಥವಾದ ಹಾಗೂ ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಇ) ಇತ್ಯರ್ಥಪಡಿಸದೇ ವಿಳಂಬ ಮಾಡುತ್ತಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ಲೋಕಾಯುಕ್ತವು ದಿನಾಂಕ ೧೫-೧-೧೯೮೬ರಂದು ಸ್ಥಾಪಿತವಾಗಿದ್ದು, ಆ ದಿನಾಂಕದಿಂದ ದಿನಾಂಕ ೨೫-೫-೧೯೮೮ರ ವರೆವಿಗೆ ೭,೦೯೯ ಅರ್ಜಿಗಳು ಸ್ವೀಕೃತವಾಗಿರುತ್ತವೆ.

ಆ) ೧) ಇತ್ಯರ್ಥವಾದ ಅರ್ಜಿಗಳ ಸಂಖ್ಯೆ ೬,೬೧೮

೨) ಇತ್ಯರ್ಥವಾಗದೇ ಉಳಿದಿರುವ ಅರ್ಜಿಗಳ ಸಂಖ್ಯೆ ೪೮೧

ಇ) ಇತ್ಯರ್ಥಗೊಳಿಸದಿರುವ ಯಾವುದೇ ಪ್ರಕರಣದಲ್ಲಿ ವಿನಾ ಕಾರಣ ವಿಳಂಬವಾಗದಿರುವುದರಿಂದ ಆ ಬಗ್ಗೆ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಒಟ್ಟು ೭೦೯೯ ಅರ್ಜಿಗಳು ಬಂದಿವೆ ಎಂದು ಹೇಳಿದ್ದಾರೆ. ೭೦೯೯ ಅರ್ಜಿಗಳಲ್ಲಿ ಕ್ಲಾಸ್-೧ ಸೂಪರ್ ಟೈಂ ಸ್ಕೇಲ್ ಮತ್ತು ಕ್ಲಾಸ್-೨ ಆಫೀಸರ್‌ಗಳ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ ? ಅವರ ಮೇಲೆ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ? ಆಮೇಲೆ ಲೋಕಾಯುಕ್ತಕ್ಕೆ ಅಧಿಕಾರಿಗಳನ್ನು ಹಾಕುವಾಗ ಅವರು ಲಂಚ ತೆಗೆದುಕೊಳ್ಳುವವರಲ್ಲ, ನ್ಯಾಯವಾಗಿ ನಡೆದು ಕೊಳ್ಳುವವರು ಎಂದು ಸ್ಕ್ರೀನ್ ಮಾಡಿ ಹಾಕುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದೇ ವಿಚಾರದಲ್ಲಿ ಈಗ ಏನು ಉಪಪ್ರಶ್ನೆ ಕೇಳಿದರೋ ಆ ಪ್ರಶ್ನೆಯನ್ನು ಆನ್ಸರ್ಡ್ ಪ್ರಶ್ನೆಯಾಗಿ ಕಳುಹಿಸಿದ್ದರು. ಅದಕ್ಕೆ ನಾನು ಉತ್ತರ ಕಳುಹಿಸಿದ್ದೇನೆ. ಬೇಕಾದರೆ ಅವರಿಗೆ ಅದರ ಒಂದು ಕಾಪಿಯನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಲೋಕಾಯುಕ್ತದಿಂದ ಲಂಚಗುಳಿತನ ಕಡಿಮೆಯಾಗುತ್ತದೆ, ಅಕ್ರಮ ಕೆಲಸಗಳು ಕಡಿಮೆಯಾಗುತ್ತದೆ ಎಂದು ನಾವು ತಿಂದುಕೊಂಡಿದ್ದೆವು. ಆದರೆ ಅದು ವಿಫಲ

ಗೊಂಡಿದೆ ಎಂದು ಧೈರ್ಯವಾಗಿ ತಾವೂ ಒಪ್ಪಿಕೊಳ್ಳುತ್ತೀರಾ ? ಏಕೆಂದರೆ ಅವರು ಯಾವ ದೊಡ್ಡ ಕುಳವನ್ನೂ ಹಿಡಿದಿಲ್ಲ. ಇದರಲ್ಲಿ ವಿಫಲಗೊಂಡಿದ್ದಾರೆ. ಇದಕ್ಕೆ ಮೊದಲು ಲೋಕಾಯುಕ್ತ ಎಂದರೆ ಸಿಂಹಸ್ವಪ್ನ ಆಗುತ್ತದೆ ಎಂದು ನಾವು ಅಂದುಕೊಂಡಿದ್ದೆವು. ಆದರೆ ಅದು ಆಗಿಲ್ಲ. ಈಗಲಾದರೂ ಅದು ಫಲಪ್ರದವಾಗುವಂತೆ ಮಾಡಿ ಅಲ್ಲಿನ ಅಧಿಕಾರಿಗಳಿಗೆ ದಂಡನೆ ವಿಧಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಅಥವಾ ಹಾಗೇ ಬಿಟ್ಟುಬಿಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಡೆ.—ಲೋಕಾಯುಕ್ತ ವಿಫಲಗೊಂಡಿದೆ ಎಂದು ಒಪ್ಪಿಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ. ಲೋಕಾಯುಕ್ತ ವಿಫಲ ಆಗಿಲ್ಲ. ಈಗ ಲೋಕಾಯುಕ್ತವನ್ನು ಸ್ಥಾಪನೆ ಮಾಡಿದ ಒಂದೇ ಕಾರಣದಿಂದ ಭ್ರಷ್ಟಾಚಾರ ಸಂಪೂರ್ಣವಾಗಿ ಹೋಗುತ್ತದೆಂದು ಯಾರೂ ಹೇಳಿಲ್ಲ. ಲೋಕಾಯುಕ್ತ ಸ್ಥಾಪನೆ ಮಾಡಿದ ಉದ್ದೇಶವೆಂದರೆ, ರಾಜಕೀಯ ಭ್ರಷ್ಟಾಚಾರ, ಸರ್ಕಾರಿ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರ ಇದರ ಬಗ್ಗೆ ದೂರು ಇದ್ದರೆ ಆ ದೂರಿನ ಬಗ್ಗೆ ಒಳ್ಳೆಯ ರೀತಿಯ ತನಿಖೆಯನ್ನು ಮಾಡಬೇಕಂ, ಮತ್ತು ದೂರಿನಲ್ಲಿ ಸತ್ಯವಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವುದು. ನಾವು ಆಗಲೇ ಅನೇಕ ಅಧಿಕಾರಿಗಳ ಮೇಲೆ ಲೋಕಾಯುಕ್ತರ ತನಿಖೆಯಂ ವರದಿ ಬಂದಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅನೇಕ ಅಧಿಕಾರಿಗಳನ್ನು ಸೇವೆಯಿಂದ ನಿವೃತ್ತಿ ಮಾಡಿದ್ದೇವೆ, ಸೇವೆಯಿಂದ ತೆಗೆದುಹಾಕಿದ್ದೇವೆ. ಆದುದರಿಂದ ಲೋಕಾಯುಕ್ತ ವಿಫಲವಾಗಿದೆ ಎಂದು ಹೇಳತಕ್ಕ ಪ್ರಶ್ನೆ ಇಲ್ಲ. ಅದು ವಿಫಲ ಆಗಿಲ್ಲ. ಮತ್ತೆ ಲೋಕಾಯುಕ್ತದಲ್ಲಿ ಕೆಲಸ ಮಾಡತಕ್ಕ ನಮ್ಮ ಸರ್ಕಾರಿ ಅಧಿಕಾರಿಗಳನ್ನು ನಾವು ಆರಿಸತಕ್ಕ ಅಧಿಕಾರ ಇಲ್ಲ. ಲೋಕಾಯುಕ್ತರು ನಮ್ಮ ಅಧಿಕಾರಿಗಳ ಕಾನ್ಫಿಡೆನ್ಸಿಯಲ್ ರೆಕಾರ್ಡ್ ತರಿಸಿ, ಅವರು ಒಂದು ಪ್ಯಾನಲ್ ಕಳುಹಿಸಿಕೊಡುತ್ತಾರೆ. ಬೇರೆ ಬೇರೆ ಅಧಿಕಾರಿಗಳ ಒಂದು ಹುದ್ದೆಗೆ ೩ ಅಥವಾ ನಾಲ್ಕು ಜನರ ಒಂದಂ ಪ್ಯಾನಲ್ ಕಳುಹಿಸಿಕೊಡುತ್ತಾರೆ, ಆ ಪಾನಲ್‌ನಲ್ಲಿ ನಾವು ಒಬ್ಬ ಅಧಿಕಾರಿಯನ್ನು ತೆಗೆದುಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—೬೭೦೮ ಅರ್ಜಿಗಳಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ ಹಾಗೂ ಎಷ್ಟು ಜನರಿಗೆ ಶಿಕ್ಷೆ ಆಗದೇ ಹಾಗೆಯೇ ಬಿಡಲಾಗಿದೆ ? ನನ್ನಲ್ಲಿ ಅನ್‌ಸ್ಟಾರ್ಡ್ ಕ್ವೆಶ್ಚನ್ ಕಾಪಿ ಇಲ್ಲ. ದಯವಿಟ್ಟು ಅದನ್ನು ಕಳುಹಿಸಿದರೆ ಬೇರೆ ಒಂದು ಪ್ರಶ್ನೆಯನ್ನು ಕೇಳಲಂ ಅನುಕೂಲವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಅದನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅನ್‌ಸ್ಟಾರ್ಡ್ ಕ್ವೆಶ್ಚನ್‌ಗೆ ಉತ್ತರವನ್ನು ಅವರಿಗೆ ಕೊಟ್ಟರೆ ನಿಮ್ಮಿಬ್ಬರಿಗೆ ಮಾತ್ರ ಉತ್ತರ ಗೊತ್ತಾಗುತ್ತದೆ. ಶಿಕ್ಷೆಗೆ ಒಳಗಾದವರಲ್ಲಿ ಒಂದನೇ ದರ್ಜೆ, ಎರಡನೇ ದರ್ಜೆ, ಮೂರನೇ ದರ್ಜೆಯ ಅಧಿಕಾರಿಗಳು ಎಷ್ಟು ಜನರಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಡೆ.—ಈ ಬಗ್ಗೆ ಮತ್ತೊಂದಂ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉತ್ತರ ಇದೆ, ನೋಡಿ ಎಂದು ಅವರಿಗೆ ಹೇಳಿದಿರಿ.

ಅಧ್ಯಕ್ಷರಂ.—ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೂಪರ್ ಟೈಮ್ ಸ್ಕೇಲ್‌ನಲ್ಲಿ ಕೆಲಸಮಾಡುವವರಿಗೆ ಎಷ್ಟು ಎಂದು ಕೇಳಿದ್ದಕ್ಕೆ ಅನ್‌ಸ್ಟಾರ್‌ನಲ್ಲಿ ಉತ್ತರ ಒದಗಿಸಿರುವುದಾಗಿ ಹೇಳಿದ್ದಾರೆ. ಅದು ನಮಗೆ ಬೇಕು.

ಅಧ್ಯಕ್ಷರಂ.—ಅನ್‌ಸ್ಟಾರ್ಡ್ ಉತ್ತರವನ್ನು ಎಲ್ಲಾ ಸದಸ್ಯರಿಗೂ ಕೊಟ್ಟಿರುತ್ತೇವೆ. ಆದರೆ ಉತ್ತರ ತಮ್ಮ ಕೈಸೇರಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ನಾನಂ ಉಪಪ್ರಶ್ನೆ ಕೇಳುತ್ತೇನೆ. ಈ ೬೭೦೮ ಜನರಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ? ಶಿಕ್ಷೆ ಆದವರಲ್ಲಿ ಸೂಪರ್ ಟೈಮ್ ಸ್ಕೇಲ್‌ನಲ್ಲಿರುವವರ ಸಂಖ್ಯೆ ಎಷ್ಟು ? ಕ್ಲಾಸ್ I ಎಷ್ಟು, ಕ್ಲಾಸ್ II ಎಷ್ಟು ಹಾಗೂ ಉಳಿದವರು ಎಷ್ಟು?

ಶ್ರೀ ರಾಮಕೃಷ್ಣ ಹೆಗಡೆ.—ಆ ವಿವರ ನನ್ನ ಹತ್ತಿರ ಇಲ್ಲ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ೧೯೮೬-೮೭ರಲ್ಲಿ ೬೪ ಕ್ರಿಮಿನಲ್ ಕೇಸುಗಳನ್ನಲ್ಲಿ ಡಿಟೆಕ್ಟ್ ಮಾಡಿದಾ ರೆ. ಹಾಗೆಯೇ ೧೯೮೭-೮೮ರಲ್ಲಿ

ಗಿಳಿಳ ಕೇಸ್‌ಗಳನ್ನು ಡಿಟೆಕ್ಟ್ ಮಾಡಿದ್ದಾರೆ. ಯಾರು ಯಾರಿಗೆ ತನಿಖೆ ಆದವೇಲೆ ಶಿಕ್ಷೆ ಆಯಿತು, ಜೈಲು ಶಿಕ್ಷೆ ಆಯಿತು ಎನ್ನುವ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ೬೬೧೪ ಜನರಲ್ಲಿ ಎಷ್ಟು ಜನರಿಗೆ ಶಿಕ್ಷೆ ಆಗಿದೆ ಎನ್ನುವ ಬಗ್ಗೆ ಕಾಸ್ಲ್‌ಮೈಸ್ ಇರಲೇಬೇಕಲ್ಲವೇ ? We are asking pertinent questions pertaining to Government servants.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಅವರು ಉತ್ತರ ಕೊಟ್ಟಿದ್ದಾರೆ. ಹೆಚ್ಚಿನ ವಿವರಗಳ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿ ಎಂದು ಹೇಳಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಕ್ಲಾಸ್ I ಎಷ್ಟು, ಸೂಪರ್ ಟೈಮ್‌ನವರು ಎಷ್ಟು ಎಂಬುದು ಗೊತ್ತಾಗಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದ್ದೇನೆ. ಉತ್ತರ ಕೊಡಿ ಸ್ವಾಮಿ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ತಾವು ಪ್ರಶ್ನೆ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಶ್ರೀ ವೆಂಕಟರಾವಂಯ್ಯನವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು, ಏನೆಂದರೆ ಈಗ ಲೋಕಾಯುಕ್ತ ನೇಮಕ ಮಾಡಿದೆ ಮೇಲೆ ಲಂಚಗುಳಿತನ ಎಲ್ಲಾ ಮಾಯವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ ಎಂದು. ಇದನ್ನು ನೇಮಕ ಮಾಡಿದಮೇಲೆ ತಾವು ಸೆಕ್ರಿಟರಿಗಳಿಗೆ ಮತ್ತು ಅಧಿಕಾರಿಗಳಿಗೆ. ಏನು ಸರ್ಕ್ಯೂಲಾರ್ ಕಳಿಸಿದಿರಿ? ಆದರಲ್ಲಿ ಲಂಚಗುಳಿತನ ತಾಂಡವಾಡುತ್ತಿದೆ. ಎಲ್ಲರೂ ಸೆಕ್ರಿಟರಿಗಳು ಆದಿಯಾಗಿ ದೊಡ್ಡ ದೊಡ್ಡ ಅಧಿಕಾರಿಗಳು ಇದರಲ್ಲಿ ಒಳಪಟ್ಟಿದ್ದಾರೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಸವಲಿಂಗಪ್ಪನವರು ತಪ್ಪು ತಲೆಯಲ್ಲಿರತಕ್ಕಂಥ ವಿಚಾರವನ್ನು ಇಲ್ಲಿ ನನ್ನ ಬಾಯಿಯಲ್ಲಿ ಹಾಕತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ, ನಾನು ಭ್ರಷ್ಟಾಚಾರ ನಮ್ಮ ಸೆಕ್ರೆಟರಿಯೇಟ್‌ನ ಮೇಲಿನಿಂದ ಕೆಳಗಿನವರೆಗೆ ತಾಂಡವಾಡುತ್ತಿದೆ ಎಂದು ಹೇಳಲಿಲ್ಲ. ಆ ಒಂದು ಸರ್ಕ್ಯೂಲರ್ ಲೆಟರ್‌ನಲ್ಲಿ ಇಷ್ಟು ಹೇಳಿದ್ದು ನಿಜ. ಅದು ಏನೆಂದರೆ ಜನರಿಂದ ನಮ್ಮ ಸರ್ಕಾರ ಆರಿಸಿ ಬಂದು ಇಷ್ಟು ವರ್ಷಗಳಾದವು. ಜನರಿಂದ ಇನ್ನೂ ದೂರು ಬರುತ್ತಿದೆ. ಭ್ರಷ್ಟಾಚಾರ ಎಷ್ಟು ಪ್ರಮಾಣದಲ್ಲಿ ಕಡಿಮೆ ಆಗಬೇಕೋ ಅಷ್ಟು ಪ್ರಮಾಣದಲ್ಲಿ ಅದು ಕಡಿಮೆಯಾಗಿಲ್ಲ. ಆದ್ದರಿಂದ ದಕ್ಷತೆ ಹೆಚ್ಚು ಮಾಡತಕ್ಕಂಥ ಅಗತ್ಯ ಇದೆ. ಆದ್ದರಿಂದ ನೀವು ಇದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ನಾನು ಅವರಿಗೆ ಹೇಳಿದ್ದು ನಿಜ. ತಾಂಡವವಾಡುತ್ತಿದೆ, ಹಾಗಾಗುತ್ತಿದೆ, ಹೀಗಾಗುತ್ತಿದೆ ಎನ್ನುವ ಶಬ್ದವನ್ನು, ಭಾಷೆಯನ್ನು ನಾನು ಬಳಸಿಲ್ಲ.

ಪೋಲೀಸ್ ಪೇದೆಗಳಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುವ ಯೋಜನೆ.

೧೭೦೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ). —ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪೋಲೀಸು ಪೇದೆಗಳಿಗೆ ಸರ್ಕಾರದವರು ವಸತಿ ಗೃಹಗಳನ್ನು ಕಟ್ಟಿಸಿಕೊಡುವ ಯೋಜನೆ ಇದೆಯೇ, ಹಾಗಿದ್ದಲ್ಲಿ ೮೭-೮೮ನೇ ಸಾಲಿನಲ್ಲಿ ಕಟ್ಟಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು (ವಿವರ ನೀಡುವುದು)

ಆ) ಪೋಲೀಸ್ ಪೇದೆಗಳಿಗೆ ಕೊಡುತ್ತಿರುವ ಸಂಬಳ ಎಷ್ಟು.

ಇ) ಪೋಲೀಸ್ ಪೇದೆಗಳಲ್ಲಿ ಪದವೀಧರರು ಇದ್ದಾರೆಯೇ ಹಾಗಿದ್ದಲ್ಲಿ ಪದವೀಧರ ಪೇದೆಗಳಿಗೆ ಆದ್ಯತೆ ಮೇರೆಗೆ ಬಡ್ತಿ ನೀಡಲಾಗುವುದೇ ಅಥವಾ ಮುಂಗಡ ವಾರ್ಷಿಕ ವೇತನವನ್ನು ಕೊಡಲಾಗುವುದೆ.

ಈ) ಪೋಲೀಸ್ ಇಲಾಖೆಯ ಸಮವಸ್ತ್ರ ಬಣ್ಣವನ್ನು ಬದಲಾಯಿಸಿ ಬೇರೆ ಬಣ್ಣದ ವಸ್ತ್ರಗಳನ್ನು ನೀಡಲಾಗುವುದೇ, ಹಾಗಿದ್ದಲ್ಲಿ ಯಾವ ಬಣ್ಣದ ಸಮವಸ್ತ್ರವನ್ನು ಒದಗಿಸಲು ಯೋಜಿಸಿದೆ.